<u>ಸಿ.ಡಬ್ಲೂ.-01 / ಪಿ.ಡಬ್ಲೂ-07</u>

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 81/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಚಂದನ್ ನಾಗರಾಜ |
| ತಂದೆಯ ಹೆಸರು | : | ನಾಗರಾಜ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಬೆಂಗಳೂರು. |

**<u>ಸಾಕ್ಷಿಯನ್ನು ದಿನಾಂಕಃ 22.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ</u>**

ಚಾಸಾ-2 ಮತ್ತು ಚಾಸಾ-9 ರವರ ಪರಿಚಯವಿರುತ್ತದೆ. ಹೆಚ್.ಡಿ. ಕೋಟೆ ತಾಲ್ಲೋಕಿನ ಬಣವಾಡಿ ಗ್ರಾಮದ ಸ.ನಂ. 16/8, 16/9, 16/10, 16/16 ಹಾಗು 16/45 ರಲ್ಲಿನ ಒಟ್ಟು 13 ಎಕರೆ ಜಮೀನಿನ ನಿರ್ವಹಣೆ ಸಂಬಂಧಿಸಿದಂತೆ ಚಾಸಾ-7 ಮತ್ತು ಚಾಸಾ-8 ರವರು ನನಗೆ ಎಸ್.ಪಿ.ಎ. ಬರೆದುಕೊಟ್ಟಿದ್ದು ಅದರಂತೆ ದಿನಾಂಕಃ 19.06.2020 ರಂದು ಬೆಳಿಗ್ಗೆ ಸುಮಾರು 10.45 ಗಂಟೆ ಸಮಯದಲ್ಲಿ ಸದರಿ ಬಣವಾಡಿ ಗ್ರಾಮದ ಸ.ನಂ. 16/8 ರ ಜಮೀನಿನಲ್ಲಿ ಬಾಳೆ ಗಿಡ ನಡುವ ಸಲುವಾಗಿ ನಾನು, ಚಾಸಾ-2 ಮತ್ತು ಚಾಸಾ-3 ರವರು ಹೊಂಡ ತೆಗೆಸುತ್ತಿರುವಾಗ ಅಲ್ಲಿಗೆ ಏಕಾ-ಏಕಿ ಆರೋಪಿಗಳು ಬಂದು ನಮ್ಮನ್ನು ಕುರಿತು ಬೋಳೀಮಕ್ಕಳೇ, ಸೂಳೇಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿದ್ದು ಆಗ ನಾವು ಏಕೆ ಗಲಾಟೆ ಮಾಡುತ್ತಿದ್ದೀರಿ

ಎಂದು ಕೇಳಿದಾಗ ಆರೋಪಿಗಳು ಈ ಜಮೀನು ನಮ್ಮದು, ಇಲ್ಲಿಂದ ಹೋಗದಿದ್ದರೆ ನಿಮ್ಮನ್ನು ಕೊಚ್ಚುತ್ತೇವೆಂದು ಬೆದರಿಕೆ ಹಾಕಿರುತ್ತಾರೆ. ನಂತರ ನಾವು ಅಲ್ಲಿಂದ ಹೊರಟು ನಾನು ಅದೇ ದಿನ ಬೆಂಗಳೂರಿಗೆ ಹೋಗಿ ಅಲ್ಲಿ ಜಮೀನಿನ ಸಂಬಂಧ ನನಗೆ ಎಸ್.ಪಿ.ಎ. ಬರೆದುಕೊಟ್ಟ ಚಾಸಾ-8 ಮತ್ತು ಚಾಸಾ-9 ರವರ ಬಳಿ ಹೋಗಿ ವಿಚಾರ ತಿಳಿಸಿದ್ದು ನಂತರ ನಾವು ಮಾತುಕತೆ ಮಾಡಿದ ನಂತರ ದಿನಾಂಕಃ 26.06.2020 ರಂದು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ಹೋಗಿ ಆರೋಪಿಗಳ ವಿರುದ್ದ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ತಾನು ಆರೋಪಿಗಳ ವಿರುದ್ಧ ನೀಡಿದ ದೂರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ದೂರನ್ನು **ನಿ.ಪಿ.-1** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.-1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಡಿ.ಆರ್.ಎಂ. ವಕೀಲರಿಂದಃ**

ನಾನು ಮೂಲತಃ ಬೆಂಗಳೂರಿನ ವಾಸಿಯಾಗಿರುತ್ತೇನೆ. ನಾನು ಫಾರ್ಮಿಂಗ್ ಹಾಗು ವ್ಯಾಪಾರ ಮಾಡಿಕೊಂಡಿರುತ್ತೇನೆ. ಬಣವಾಡಿ ಗ್ರಾಮದ ಸ.ನಂ. ಗಳಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಆಸ್ತಿ ಇರುತ್ತದೆಂದು ನನಗೆ ಗೊತ್ತಿರುವುದಿಲ್ಲ. ನನಗೆ ಎಸ್.ಪಿ.ಎ. ಬರೆದುಕೊಟ್ಟ ಚಾಸಾ-8 ಮತ್ತು ಚಾಸಾ-9 ರವರಿಗೆ ಸದರಿ ಆಸ್ತಿ ಕ್ರಯ ಪತ್ರದ ಮೂಲಕ ಬಂದಿರುತ್ತದೆ. ಸದರಿ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಕ್ರಯ ಪತ್ರ 2010 ನೇ ಇಸವಿಗೆ ಸಂಬಂಧಿಸಿದ್ದಾಗಿದೆ. ಸದರಿ ಆಸ್ತಿಯನ್ನು ಚಾಸಾ-8 ಮತ್ತು ಚಾಸಾ-9 ರವರು ಚಾಸಾ-2

ಹಾಗು ಅವರ ಕುಟುಂಬ ಸದಸ್ಯರಿಂದ ಕ್ರಯಕ್ಕೆ ಪಡೆದಿರುತ್ತಾರೆ. ನಾನು ಪೋಲೀಸರಿಗೆ ದೂರನ್ನು ನೀಡುವ ಸಮಯದಲ್ಲಿ ಸದರಿ ಬಣವಾಡಿ ಗ್ರಾಮದ ಸ.ನಂ. 16/8, 16/9, 16/10, 16/16 ಹಾಗು 16/45 ರ ಆಸ್ತಿಯ ಖಾತೆ ಚಾಸಾ-2 ರವರ ಹೆಸರಿನಲ್ಲಿ ಇದ್ದಿರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ನನಗೆ ಎಸ್.ಪಿ.ಎ. ಬರೆದುಕೊಟ್ಟ ಸಮಯದಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಚಾಸಾ-8 ಮತ್ತು ಚಾಸಾ-9 ರವರ ಹೆಸರಿನಲ್ಲಿ ಯಾವುದೇ ಖಾತೆ ಇದ್ದಿರಲಿಲ್ಲ. ನಾನು ದೂರನ್ನು ಕೊಡುವ ಸಮಯದಲ್ಲಿ ಸದರಿ ದೂರಿನ ಜೊತೆ ಚಾಸಾ-8 ಮತ್ತು ಚಾಸಾ-9 ರವರು ನನಗೆ ಬರೆದುಕೊಟ್ಟ ಎಸ್.ಪಿ.ಎ. ಪ್ರತಿಯನ್ನು ಪೋಲೀಸರಿಗೆ ನೀಡಿರುತ್ತೇನೆ. ನಾನು ಹಾಗು ಚಾಸಾ-2 ರವರು ಸ್ನೇಹಿತರು ಎಂದರೆ ಸರಿ. ಈ ದಿನ ನನ್ನ ಜೊತೆ ಚಾಸಾ-2 ರವರು ಸಹ ನ್ಯಾಯಾಲಯಕ್ಕೆ ಬಂದಿರುತ್ತಾರೆಂದರೆ ಸರಿ. ಸದರಿ ಮೇಲೆ ಹೇಳಿದ ಜಮೀನಿಗೆ ಸಂಬಂಧಿಸಿದಂತೆ ಆರೋಪಿತರು ಚಾಸಾ-2 ಹಾಗು ಅವರ ಕುಟುಂಬದವರ ಮೇಲೆ ಹೆಚ್.ಡಿ. ಕೋಟೆಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 68/2020 ಮತ್ತು 70/2020 ರಂತೆ ದಾವೆ ಹೂಡಿರುತ್ತಾರೆಂದರೆ ಸರಿ. ಅದೇ ರೀತಿ ಚಾಸಾ-2 ರವರು ಸಹ ಆರೋಪಿತರ ವಿರುದ್ಧ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 132/2022 ರಂತೆ ದಾವೆ ಹೂಡಿರುತ್ತಾರೆಂದರೆ ಸರಿ. ನಾನು ಪೋಲೀಸರಿಗೆ ನೀಡಿದ ದೂರಿನ ಜೊತೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರ ಹಾಗು ಇತರ ಕಂದಾಯ ದಾಖಲೆಗಳನ್ನು ಪೋಲೀಸರಿಗೆ ನೀಡಲು ಯಾವುದೇ ತೊಂದರೆ ಇದ್ದಿರಲಿಲ್ಲ. ಸದರಿ ಆಸ್ತಿಗೆ ಸಂಬಂಧಿಸಿದಂತೆ ನನಗೆ ಎಸ್.ಪಿ.ಎ. ಬರೆದುಕೊಟ್ಟ ಈಚೆಗೆ ಯಾವುದೇ ದುರಸ್ತಿಯಾಗಿರುವುದಿಲ್ಲ. ನಾನು

ಸದರಿ ಆಸ್ತಿಯ ನಿರ್ವಹಣೆಗೆ ತೆಗೆದುಕೊಂಡ ನಂತರ ಇದುವರೆಗು ಯಾವುದೇ ಅಳತೆ ಕಾರ್ಯ ಮಾಡಿಸಿರುವುದಿಲ್ಲ. ಸಾಕ್ಷಿ ಮುಂದುವರಿದು ಆ ಬಗ್ಗೆ ಅರ್ಜಿ ಕೊಟ್ಟಿರುತ್ತೇವೆಂದು ನುಡಿಯುುತ್ತಾರೆ. ಬಣವಾಡಿ ಗ್ರಾಮದ ಸ.ನಂ. ಗಳಲ್ಲಿ ಒಟ್ಟು 840 ಎಕರೆ ವಿಸ್ತೀರ್ಣದ ಜಮೀನು ಇರುತ್ತದೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಮೇಲೆ ಹೇಳಿದ 13 ಎಕರೆ ಜಮೀನಿನ ಚೆಕ್ಕುಬಂದಿ ನನಗೆ ಈಗ ಹೇಳಲು ಆಗುವುದಿಲ್ಲ. ಸಾಕ್ಷಿಯು ಮುಂದುವರಿದು ನನಗೆ ಬರೆದುಕೊಟ್ಟ ಎಸ್.ಪಿ.ಎ. ನಲ್ಲಿ ಸದರಿ ಜಮೀನಿನ ಚೆಕ್ಕುಬಂದಿ ನಮೂದಿಸಲಾಗಿದೆ ಎಂದು ನುಡಿಯುತ್ತಾರೆ. ನನಗೆ ಎಸ್.ಪಿ.ಎ. ಬರೆದುಕೊಟ್ಟ ಇಲ್ಲಿಯವರೆಗು ಸದರಿ ಆಸ್ತಿಗೆ ಸಂಬಂಧಿಸಿದಂತೆ ಚಾಸಾ-8 ಮತ್ತು ಚಾಸಾ-9 ರವರ ಹೆಸರಿಗೆ ಯಾವುದೇ ಖಾತೆ ಆಗಿರುವುದಿಲ್ಲ. ಸಾಕ್ಷಿಯು ಮುಂದುವರಿದು ಈ ಬಗ್ಗೆ ಅವರು ಅರ್ಜಿ ನೀಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಮೇಲೆ ಹೇಳಿದ ಬಣವಾಡಿ ಗ್ರಾಮದ ಸ.ನಂ. 16/8, 16/9, 16/10, 16/16 ಹಾಗು 16/45ರ ಆಸ್ತಿಗೆ ಸಂಬಂಧಿಸಿದಂತೆ ಚಾಸಾ-8 ಮತ್ತು ಚಾಸಾ-9 ರವರ ಹೆಸರಿನಲ್ಲಿ ಯಾವುದೇ ದಾಖಲೆ ಇರುವುದಿಲ್ಲ ಹಾಗು ನಾವುಗಳು ಸದರಿ ಆಸ್ತಿಯ ಯಾವುದೇ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ-2 ರವರ ವಿರುದ್ಧ ಸಿವಿಲ್ ದಾವೆ ಹೂಡಿದ್ದರಿಂದ ಅದರಿಂದ ತಪ್ಪಿಸಿಕೊಳ್ಳಲು ನನ್ನ ಸ್ನೇಹಿತನಾದ ಚಾಸಾ-2 ರವರು ಆರೋಪಿತರ ವಿರುದ್ಧ ನನ್ನ ಮೂಲಕ ಈ ಸುಳ್ಳು ದೂರನ್ನು ಕೊಡಿಸಿರುತ್ತಾರೆಂದರೆ ಸರಿಯಲ್ಲ. ಚಾಸಾ-8 ಮತ್ತು ಚಾಸಾ-9ರವರು ನನಗೆ ಯಾವುದೇ ಎಸ್.ಪಿ.ಎ. ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ಚಾಸಾ-2, ಚಾಸಾ-8 ಮತ್ತು

ಚಾಸಾ-9 ರವರು ಸೇರಿ ಮೇಲೆ ಹೇಳಿದ ಬಣವಾಡಿ ಗ್ರಾಮದ ಸ.ನಂ. 16/8, 16/9, 16/10, 16/16 ಹಾಗು 16/45 ಆರೋಪಿಗಳು ಸ್ವಾಧೀನದಲ್ಲಿರುವ ಆಸ್ತಿಯಿಂದ ಅವರನ್ನು ಹೊರಗೆ ಹಾಕುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆಂದರೆ ಸರಿಯಲ್ಲ. ಗಲಾಟೆ ನಡೆದ ಸಮಯದಲ್ಲಿ ನಾವು ಯಾವುದೇ ವೀಡಿಯೋ ಮಾಡಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಯಾವುದೇ ಕೃತ್ಯವನ್ನು ಎಸಗದೇ ಇದ್ದಾಗ್ಯೂ ಸಹ ನಾನು, ಚಾಸಾ-2, ಚಾಸಾ-8 ಮತ್ತು ಚಾಸಾ-9 ರವರು ಶಾಮೀಲಾಗಿ ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿ ಅದಕ್ಕೆ ಪೂರಕವಾಗಿ ಈಗ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**